# EXAMINATION FOR RECRUITMENT TO THE POSTS OF DISTRICT JUDGES
ಜಿಲ್ಲಾ ನ್ಯಾಯಾಧೀಶರುಗಳ ಹುದ್ದೆಗಳಿಗೆ ನೇಮಕಾತಿ ಪರೀಕ್ಷೆ

## QUESTION PAPER
ಪ್ರಶ್ನೆ ಪತ್ರಿಕೆ

**30TH AUGUST, 2015**
ದಿನಾಂಕ ೩೦ನೇ ಆಗಸ್ಟ್ ೨೦೧೫

**Max. Marks: 150**
ಗರಿಷ್ಠ ಅಂಕಗಳು: ೧೫೦

**TIME: 10.00 am to 1.00 pm**
ಸಮಯ: ಬೆಳಗ್ಗೆ ೧೦.೦೦ ರಿಂದ ಮಧ್ಯಾಹ್ನ ೧.೦೦ ಘಂಟೆ

**INSTRUCTIONS TO CANDIDATES:**
ಅಭ್ಯರ್ಥಿಗಳಿಗೆ ಸೂಚನೆಗಳು

1) It is compulsory for all the candidates to answer atleast one of the papers in English and in so far as the other paper is concerned, it shall be optional for the candidates to answer the same either in English or in Kannada.

   ಅಭ್ಯರ್ಥಿಗಳು ಖಡ್ಡಾಯವಾಗಿ ಒಂದು ಪ್ರಶ್ನೆ ಪತ್ರಿಕೆಯನ್ನು ಆಂಗ್ಲಭಾಷೆಯಲ್ಲಿ ಉತ್ತರಿಸಬೇಕು. ಉಳಿದ ಪ್ರಶ್ನೆ ಪತ್ರಿಕೆಯನ್ನು ಕನ್ನಡ ಅಥವಾ ಆಂಗ್ಲ ಭಾಷೆಯಲ್ಲಿ ಉತ್ತರಿಸುವುದನ್ನು ಅಭ್ಯರ್ಥಿಗಳ ವಿವೇಚನೆಗೆ ಬಿಡಲಾಗಿದೆ.

2) If there is any discrepancy in the questions in English language and in Kannada language, the questions as framed in English language would prevail.

   ಒಂದು ವೇಳೆ ಪ್ರಶ್ನೆಗಳಲ್ಲಿ ಆಂಗ್ಲ ಭಾಷೆ ಮತ್ತು ಕನ್ನಡ ಭಾಷೆ ನಡುವೆ ಲೋಪ ಕಂಡುಬಂದಲ್ಲಿ, ಆಂಗ್ಲ ಭಾಷೆಯಲ್ಲಿ ಮುದ್ರಿಸಿರುವ ಪ್ರಶ್ನೆಯು ನಿರ್ಣಾಯಕವಾಗುವುದು.

**Answer the following questions:**
**ಈ ಕೆಳಗಿನ ಪ್ರಶ್ನೆಗಳನ್ನು ಉತ್ತರಿಸಿ:**

**I**

a) What is the meaning of 'Evidence' according to the Evidence Act? 2
ಸಾಕ್ಷ್ಯ ಕಾಯಿದೆಯ ಪ್ರಕಾರ 'ಸಾಕ್ಷ್ಯ' ಪದದ ಅರ್ಥವನ್ನು ಬರೆಯಿರಿ

b) How facts in issue are proved? 2
'ವಿವಾದದಲ್ಲಿರುವ ಸಂಗತಿ' ಯನ್ನು ರಜುವಾತುಪಡಿಸುವ ಬಗೆಯನ್ನು ತಿಳಿಸಿ.

c) 'Oral Evidence must be direct' – Explain 4
'ಮೌಖಿಕ ಸಾಕ್ಷ್ಯ ನೇರವಾದ ರೀತಿಯಲ್ಲಿರಬೇಕು' – ವಿವರಿಸಿ

d) How contents of documents are proved? 2
ದಾಖಲೆಗಳ ಒಕ್ಕಣೆಗಳನ್ನು ರುಜುವಾತುಪಡಿಸುವ ರೀತಿಯನ್ನು ತಿಳಿಸಿ.

**II**

**What do these words mean:**
**ಕೆಳಕಂಡ ಪದಗಳ ಅರ್ಥವನ್ನು ತಿಳಿಸಿ:**

(a) Production of documents in evidence 1
ಸಾಕ್ಷ್ಯಕ್ಕಾಗಿ ದಾಖಲೆಗಳ ಹಾಜರುಪಡಿಸುವಿಕೆ

(b) Objection regarding marking of a document 1
ದಾಖಲೆಗಳನ್ನು ಗುರುತಿಸುವುದಕ್ಕೆ ಎತ್ತಿದ ತಕರಾರಿನ ಬಗ್ಗೆ

(c) Impounding of a document 1
ದಾಖಲೆಯನ್ನು ಪರಿಬದ್ಧಗೊಳಿಸುವ ಬಗ್ಗೆ

(d) Proof of a document 1
ದಾಖಲೆಯನ್ನು ರುಜುವಾತುಪಡಿಸುವ ಬಗ್ಗೆ

(e) Court questions 1
ನ್ಯಾಯೊಲಯದ ಪ್ರಶ್ನೆಗಳು

(f) What are the circumstances under which additional evidence is allowed in Appellate Court? 3
ಮೇಲ್ಮನವಿ ನ್ಯಾಯಾಲಯದಲ್ಲಿ ಹೆಚ್ಚುವರಿ ಸಾಕ್ಷ್ಯವನ್ನು ಸ್ವೀಕರಿಸುವ ಸಂದರ್ಭಗಳನ್ನು ತಿಳಿಸಿ.

(g) What are the grounds for remanding the case by the Appellate Court? 2
ಮೇಲ್ಮನವಿ ನ್ಯಾಯಾಲಯವು ದಾವೆಯನ್ನು ಪುನರ್ವಿಚಾರಣೆಗಾಗಿ ವಾಪಸ್ಸು ಕಳಿಸುವ ಸಂದರ್ಭಗಳಾವುವು?

**III**

(a) What are the consequences of breach of contract 3
ಒಪ್ಪಂದ ಭಂಗದ ಪರಿಣಾಮಗಳು ಯಾವುವು?

(b) How Mitigation of damages is assessed 2
ಪರಿಹಾರವನ್ನು ಉಪಶಮನ ಮಾಡುವುದರ ಬಗ್ಗೆ ತಿಳಿಸಿ.

(c) What are the contracts which cannot be specifically enforced? 5
ನಿರ್ದಿಷ್ಟವಾಗಿ ಪರಿಪಾಲನೆ ಮಾಡಲಾಗದಂತಹ ಕರಾರುಗಳು ಯಾವುವು?

**IV**

**Write the meaning of the following:**
**ಕೆಳಕಂಡವುಗಳ ಅರ್ಥಗಳನ್ನು ಬರೆಯಿರಿ:**

(a) Coparcenery 2
ದಾಯಾದಿತ್ವ

(b) Hindu Joint Family 2
ಅವಿಭಕ್ತ ಹಿಂದು ಕುಟುಂಬ

(c) Survivorship 2
ಉತ್ತರಜೀವಿತಾಧಿಕಾರ

(d) Succession 2
ಉತ್ತರಾಧಿಕಾರ

(e) Reversion 2
ಉತ್ತರಭೋಗ

V

(a) Who are all to be added as parties in a suit for partition? 4
ವಿಭಾಗಕ್ಕಾಗಿ ಹೂಡಿದ ದಾವೆಗೆ ಸೇರಿಸಲೇಬೇಕಾದ ವ್ಯಕ್ತಿಗಳು ಯಾರು?

(b) What is the meaning of partition given in explanation to amended Section 6 of the Hindu Succession Act? 2
ಹಿಂದು ಉತ್ತರಾಧಿಕಾರಿ ಅಧಿನಿಯಮದ ಕಲಂ 6 ರ ತಿದ್ದುಪಡಿಯ ವಿವರಣೆಯಲ್ಲಿ ತಿಳಿಸಿರುವಂತೆ ವಿಭಾಗದ ಅರ್ಥವನ್ನು ತಿಳಿಸಿ.

(c) What rights are determined in a preliminary decree? 2
ಪ್ರಾರಂಭಿಕ ಡಿಕ್ರಿಯಲ್ಲಿ ಯಾವ ಹಕ್ಕುಗಳನ್ನು ಗುರುತಿಸಲ್ಪಡುತ್ತವೆ?

(d) What rights are determined in a final decree? 2
ಅಂತಿಮ ಡಿಕ್ರಿಯಲ್ಲಿ ಯಾವ ಹಕ್ಕುಗಳು ಗುರುತಿಸಲ್ಪಡುತ್ತವೆ?

VI

**State on the following:**
ಈ ಕೆಳಕಂಡವುಗಳ ಬಗ್ಗೆ ತಿಳಿಸಿ:

(a) A document required by law to be attested 2
ಕಾನೂನಿನ ಪ್ರಕಾರ ಅನುಪ್ರಮಾಣಿತಗೊಳಿಸಲ್ಪಡಬೇಕಾದ ದಾಖಲೆ.

(b) What are the documents which require attestation? 3
ಅನುಪ್ರಮಾಣ ಗೊಳಿಸಲ್ಪಡಲೇಬೇಕಾದ ದಾಖಲೆಗಳು ಯಾವುವು?

(c) "Attested"- Meaning 2
"ಅನುಪ್ರಮಾಣಿತ" - ಅರ್ಥೈಸಿ

(d) How a document which requires to be attested is proved? 3
ಅನುಪ್ರಮಾಣಿತಗೊಳಿಸಲ್ಪಡಬೇಕಾದ ದಾಖಲೆಯನ್ನು ಯಾವರೀತಿ ರುಜುವಾತುಪಡಿಸಬೇಕು?

**VII**

(a) What are void marriages? 3
ಶೂನ್ಯ ವಿವಾಹಗಳು ಎಂದರೇನು?

(b) What are voidable marriages? 2
ಶೂನ್ಯ ಕರಣೀಯ ವಿವಾಹಗಳು ಎಂದರೇನು?

(c) What is the special provision relating to trial and disposal of petitions under the Hindu Marriage Act, 1955? 3
ಹಿಂದು ವಿವಾಹ ಅಧಿನಿಯಮ 1955 ರ ಅಡಿಯಲ್ಲಿ ತಿಳಿಸಿರುವಂತೆ ಅರ್ಜಿಗಳ ವಿಲೆವಾರಿಗೆ ಸೂಚಿಸಿರುವ ವಿಶೇಷ ಉಪಬಂಧಗಳನ್ನು ತಿಳಿಸಿ.

(d) What are the grounds for varying, modifying or rescinding an order of permanent alimony and maintenance under the Hindu Marriage Act, 1955? 2
ಹಿಂದು ವಿವಾಹ ಅಧಿನಿಯಮ 1955 ರ ಅಡಿಯಲ್ಲಿ ಸೂಚಿಸಿರುವಂತೆ ಶಾಶ್ವತ ಅಥವ ವಾದಕಾಲೀನ ಜೀವನಾಂಶವನ್ನು ಅಥವ ಜೀವನಾಂಶವನ್ನು ಮಾರ್ಪಾಡು ಮಾಡುವ ವ್ಯತ್ಯಸ್ತಗೊಳಿಸುವ ಬಗ್ಗೆ, ಮಾರ್ಪಾಡು ಮಾಡುವ ಬಗ್ಗೆ ಅಥವಾ ರದ್ದುಗೊಳಿಸುವ ಬಗ್ಗೆ ಸಂದರ್ಭಗಳು ಯಾವುವು?

VIII

(a) What is the meaning of an arbitration agreement? 2

ಮಧ್ಯಸ್ಥಿಕೆ ಒಪ್ಪಂದದ ಅರ್ಥವೇನು?

(b) What is the form of an arbitration agreement? 1

ಮಧ್ಯಸ್ಥಿಕೆ ಒಪ್ಪಂದದ ನಮೂನೆ ಬಗ್ಗೆ ತಿಳಿಸಿ

(c) What are the essential requirements of an arbitration agreement? 2

ಮಧ್ಯಸ್ಥಿಕೆ ಒಪ್ಪಂದದ ಅತ್ಯಾವಶ್ಯಕ ಅಗತ್ಯಗಳು ಏನು?

(d) What are the obligations imposed on Arbitrator under Section 12 of the Act? 2

ಮಧ್ಯಸ್ಥಿಕೆ ಹಾಗೂ ಸಂಧಾನ ಅಧಿನಿಯಮ ಕಲಂ ೧೨ ರಡಿಯಲ್ಲಿ ಮಧ್ಯಸ್ಥಿಕೆದಾರನ ಭಾದ್ಯತೆಗಳಾವುವು?

(e) On what grounds appointment of an arbitrator can be challenged? 3

ಮಧ್ಯಸ್ಥಿಕೆದಾರನ ನೇಮಕಾತಿಯನ್ನು ಯಾವ ಕಾರಣಗಳ ಮೇಲೆ ಪ್ರಶ್ನಿಸಬಹುದು?

IX

(a) State the law relating to contribution and marshalling under the Transfer of property Act? 5

ಸ್ವತ್ತು ವರ್ಗಾವಣೆ ಅಧಿನಿಯಮದ ಅಡಿಯಲ್ಲಿ ಕ್ರಮ ನಿರ್ಣಯಿಸುವ ಹಾಗೂ ವಂತಿಗೆ ಕೊಡುವ ಕಾನೂನಿನ ಬಗ್ಗೆ ತಿಳಿಸಿ.

(b) What are the essential conditions to be fulfilled for granting the benefit of part performance? 5

"ಭಾಗಶಃ ನೆರವೇರಿಕೆ" ಅನುಕೂಲವನ್ನು ಮಂಜೂರು ಮಾಡುವ ಮುನ್ನ ಪೂರೈಸಬೇಕಾದ ಅತ್ಯಾವಶ್ಯಕ ಶರತ್ತುಗಳು ಯಾವುವು?

X

**Write the meaning of the following:**
ಈ ಕೆಳಕಂಡವುಗಳ ಅರ್ಥವನ್ನು ಬರೆಯಿರಿ:

(a) "Workman" under the Industrial Disputes Act, 1947. 2
ಕೈಗಾರಿಕಾ ವಿವಾದ ಅಧಿನಿಯಮದ ಅಡಿಯಲ್ಲಿ "ಕಾರ್ಮಿಕ"ನ ಅರ್ಥವನ್ನು ಬರೆಯಿರಿ

(b) "Retrenchment" under Industrial Disputes Act. 2
ಕೈಗಾರಿಕಾ ವಿವಾದ ಅಧಿನಿಯಮದ ಅಡಿಯಲ್ಲಿ "ಕೆಲಸದಿಂದ ತೆಗೆದುಹಾಕುವುದು" ರ ಅರ್ಥವನ್ನು ಬರೆಯಿರಿ

(c) "Lay off" under the Industrial Disputes Act. 2
ಕೈಗಾರಿಕಾ ವಿವಾದ ಅಧಿನಿಯಮದ ಅಡಿಯಲ್ಲಿ "ಹಂಗಾಮಿಯಾಗಿ ಕೆಲಸಗಾರರನ್ನು ವಜಾ ಮಾಡುವುದು" ರ ಅರ್ಥವನ್ನು ಬರೆಯಿರಿ

(d) "Strike" under the Industrial Disputes Act. 2
ಕೈಗಾರಿಕಾ ವಿವಾದ ಅಧಿನಿಯಮದ ಅಡಿಯಲ್ಲಿ "ಮುಷ್ಕರ" ದ ಅರ್ಥವನ್ನು ಬರೆಯಿರಿ

(e) "Trade Union" under the Trade Union Act. 2
ಕಾರ್ಮಿಕ ಸಂಘಗಳ ಅಧಿನಿಯಮದ ಪ್ರಕಾರ ಕಾರ್ಮಿಕ ಸಂಘದ ಅರ್ಥವನ್ನು ಬರೆಯಿರಿ

XI

(a) What are the ingredients of a valid Hiba under Mohameddan Law? 5
ಇಸ್ಲಾಮೀ ಕಾನೂನಿನ ಪ್ರಕಾರ "ಹಿಬಾ" ದ ಸಮಂಜಸ ಅಂಶಗಳನ್ನು ತಿಳಿಸಿ

(b) Meaning of "Hiba Shart-ul-iwaz" 2
"ಹಿಬಾ ಶರ್ತುಲ್ ಇವಜ್" - ಅರ್ಥೈಸಿ

(c) Meaning of "Mushaa" 2

"ಮುಷಾ" - ಅರ್ಥೈಸಿ

(d) Meaning of "Talaq by zihar" 1

"ತಲಾಕ್ ~ ಜಿಹರ್‌ನಿಂದ" - ಅರ್ಥೈಸಿ

**XII**

(a) State the right to education under the Constitution of India 2

ಭಾರತ ಸಂವಿದಾನದ ಅಡಿಯಲ್ಲಿ ಶಿಕ್ಷಣದ ಹಕ್ಕಿನ ಬಗ್ಗೆ ತಿಳಿಸಿ

(b) State three fundamental duties enumerated in the Constitution of India 3

ಭಾರತ ಸಂವಿದಾನದ ಅಡಿಯಲ್ಲಿ ನಮೂದಿಸಿರುವ ಮೂರು ಮೂಲಭೂತ ಕರ್ತವ್ಯಗಳ ಬಗ್ಗೆ ತಿಳಿಸಿ

(c) State briefly the difference between Article 141 and Article 142 of the Constitution of India 4

ಭಾರತ ಸಂವಿದಾನದ ಅನುಚ್ಛೇದ 141 ಮತ್ತು 142 ರ ನಡುವೆ ಇರುವ ಅಂತರವನ್ನು ಸಂಕ್ಷಿಪ್ತವಾಗಿ ತಿಳಿಸಿ

(d) What is the protection given to a public servant from dismissal or removal from service, under the Constitution of India? 1

ಭಾರತದ ಸಂವಿದಾನದ ಅಡಿಯಲ್ಲಿ, ಸಾರ್ವಜನಿಕ ಸೇವಕನನ್ನು ವಜಾಗೊಳಿಸುವಿಕೆಯಿಂದ ಇರುವ ಸಂರಕ್ಷಣೆ ಬಗ್ಗೆ ತಿಳಿಸಿ.

**XIII**

(a) What are public charities? 2

ಸಾರ್ವಜನಿಕ ಧರ್ಮಕಾರ್ಯಗಳು ಎಂದರೇನು?

(b) Distinguish between private, public and charitable Trust. 3
ಖಾಸಗೀ, ಸಾರ್ವಜನಿಕ ಹಾಗೂ ಧರ್ಮಾರ್ಥ ದತ್ತಿಗಳ ನಡುವೆ ಇರುವ ಅಂತರಗಳನ್ನು ತಿಳಿಸಿ.

(c) What are the questions to be determined by Court executing the decree? 3
ಡಿಕ್ರಿಯನ್ನು ಅಮಲ್ಜಾರಿಗೊಳಿಸುವ ಸಂದರ್ಭದಲ್ಲಿ ನ್ಯಾಯಾಲಯವು ತೀರ್ಮಾನಿಸಬೇಕಾದ ಪ್ರಶ್ನೆಗಳು ಯಾವುವು?

(d) What are the questions to be determined on an application under Rule 97 or Rule 99 of Order XXI of the Civil Procedure Code? 2
ಸಿವಿಲ್ ಪ್ರಕ್ರಿಯಾ ಸಂಹಿತೆ ಆದೇಶ XXI ನಿಯಮ 97 ಅಥವಾ 99 ರ ಅಡಿಯಲ್ಲಿ ತೀರ್ಮಾನಿಸಬೇಕಾದ ಪ್ರಶ್ನೆಗಳು ಯಾವುವು?

**XIV**

**Translate the following into Kannada:**
ಈ ಕೆಳಗಿನದನ್ನು ಕನ್ನಡ ಭಾಷೆಗೆ ಭಾಷಾಂತರಿಸಿ: **10**

On account of developing relationship with her cousin sister who lives at Shimoga, Mr. Poovaiah started ill-treating her. Exs.R-11 and R-13 are relied upon by her. When she was living at Govindarajapuram, Bangalore, along with Mr. Poovaiah as wife he appeared for her in Crime No.248/94, conducted the said case and even filed bail application on her behalf. She has studied upto II BA and knows Kannada and English languages. When she was living at Kaderenahalli to do business along with her relative Girija, a company was opened in the name of 'Girija & Suma' and the affairs of the company were looked after by said Girija. The house in which they were living belongs to the husband of Girija. Later she shifted to the house of one Venkatesh at Kaderanhalli in the year 1990 and stayed there for 3 to 4 years. She was persuaded to marry Mr. Poovaiah on his assurance that he would collect the money advanced by her to different borrowers. He was doing his LLB at that time and she met

him in the Magistrate Courts and at that time 3-4 finance recovery cases were pending. Though her people did not agree for the marriage, she married him and she started living with him at Madikeri. Her people were not aware of her whereabouts except through her relative Girija. Girija was also not allowed to attend the marriage as per the instructions of Mr. Poovaiah and only relatives of Poovaiah attended the marriage. For about 2 months they lived at his native place and shifted to Shantinagar where they lived for 1 or 2 years. Later they started living at Govindarajapura. The house at Shanthinagar was taken on rent by her and Poovaiah joined her in the said house. This is what she has stated in the examination-in-chief.

During cross-examination she admits being tenant of one Mr. Muniyappa who also filed criminal case against her and Mr. Poovaiah was also arrayed as accused in the said case. Mr. Venkatesh, her another landlord filed not only HRC proceedings but also a criminal case against her alleging that on 28.10.1990 at about 6.00 A.M. she assaulted Mr. Venkatesh. According to her, misbehaviour of Mr. Venkatesh compelled her to assault him and the said case ended in her release applying Probation of Offenders Act. Ex.P-1 is the judgment. She was in touch with her cousin sister Savithri, who knew about her marriage with Mr. Poovaiah and Ex.P-2 is the letter written to her by said Savithri when HRC case filed by Mr. Venkatesh was pending.

**XV**

**Translate the following into English:** **10**
ಈ ಕೆಳಗಿನದನ್ನು ಆಂಗ್ಲ ಭಾಷೆಗೆ ಭಾಷಾಂತರಿಸಿ:

ವಿಷಯದ ಈ ಹಿನ್ನೆಲೆಯಲ್ಲಿ ಈ ಪ್ರಕರಣದ ವಾಸ್ತವಾಂಶಗಳು, ಈ ನ್ಯಾಯಲಯದ ಪೂರ್ಣಪೀಠದ ಎದುರು ಬಂದಿದ್ದಂಥಾ ಪ್ರಕರಣಕ್ಕಿಂತ ಸಂಪೂರ್ಣ ಭಿನ್ನವಾಗಿವೆ. ಪ್ರಸ್ತುತ

ಪ್ರಕರಣದಲ್ಲಿ, ಒಪ್ಪಿಕೊಂಡಂತೆ, ಬಸ್ಸಿನ ಛಾವಣಿಯ ಮೇಲೆ ಪ್ರಯಾಣಿಸುತ್ತಿದ್ದ ವ್ಯಕ್ತಿಯು, ಅಪರಾಧಕ್ಕೆ ಗುರಿಯಾಗಿರುವ ಬಸ್ಸಿನ ನಿರ್ವಾಹಕ ಮತ್ತು ಚಾಲಕನ ಸಮ್ಮತಿ ಅಥವಾ ಒಪ್ಪಿಗೆಯನ್ನು ಪಡೆಯದೆ ಪ್ರಯಾಣಿಸಿರುತ್ತಾನೆ. ಮುಂದುವರೆದು ಇವನು ಅನಧಿಕೃತವಾಗಿ, ಮುಫತ್ತಾಗಿ ಪ್ರಯಾಣಿಸುವ ಪ್ರಯಾಣಿಕನಾಗಿರುತ್ತಾನೆ. ವಾಸ್ತವವಾಗಿ, ಬಸ್ಸಿನ ಛಾವಣಿಯ ಮೇಲೆ ಕ್ಲೇಮುದಾರನು ಕುಳಿತಿರುವ ಬಗ್ಗೆಯೇ ಬಸ್ಸಿನ ಚಾಲಕ ಮತ್ತು ನಿರ್ವಾಹಕನಿಗೆ ತಿಳಿದಿರುವುದಿಲ್ಲ. ಆದ್ದರಿಂದ, ಚಾಲಕ ಅಥವಾ ನಿರ್ವಾಹಕನ ಭಾಗಕ್ಕೆ ಯಾವುದೇ ಹೊಣೆಗಾರಿಕೆಯ ನಿರ್ಲಕ್ಷ್ಯವನ್ನು ನಿಗಧಿಪಡಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ವಿಷಯದ ಈ ಹಿನ್ನೆಲೆಯಲ್ಲಿ ಸಿಂಧುವಾದ ಟಿಕೇಟನ್ನು ಖರೀದಿಸದೆ ಬಸ್ಸಿನ ಛಾವಣಿಯ ಮೇಲೆ ಕ್ಲೇಮುದಾರನು ಕುಳಿತು ಪ್ರಯಾಣಿಸುತ್ತಿದ್ದುದ್ದು ಆತನ ಸ್ವಯಂಕೃತ ಅಪರಾಧವಾಗಿರುತ್ತದೆ. ವಿಷಯದ ಈ ಹಿನ್ನೆಲೆಯಲ್ಲಿ ಕ್ಲೇಮುದಾರನ ಮೇಲೆ ಆತನಿಗಷ್ಟೆ ಸಂಬಂಧಪಡುವಷ್ಟರ ಮಟ್ಟಿಗೆ ಹೊಣೆಗಾರಿಕೆಯ ನಿರ್ಲಕ್ಷ್ಯವನ್ನು ನಿಗದಿಗೊಳಿಸಬೇಕೇ ಹೊರತು, ಬಸ್ಸಿನ ಚಾಲಕ ಮತು ನಿರ್ವಾಹಕನಿಗೆ ಅದನ್ನು ವಿಸ್ತರಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಹಾಗಾಗಿ, ಈ ನ್ಯಾಯಲಯವು, ಕ್ಲೇಮುದಾರನು ಸಿಂಧುವಾದ ಟಿಕೆಟ್ ಇಲ್ಲದೆ ಮತ್ತು ಬಸ್ಸಿನ ನಿರ್ವಾಹಕನಿಂದಾಗಲಿ ಅಥವಾ ಚಾಲಕನಿಂದಾಗಿ ಅನುಮತಿಯನ್ನು ಪಡೆಯದೆ ಬಸ್ಸಿನ ಛಾವಣಿಯ ಮೇಲೆ ಕುಳಿತು ಪ್ರಯಾಣಿಸುತ್ತಿದ್ದನು. ಆತನೇ ಸ್ವತಃ ಮೇಲೆ ಹೇಳಿದ ರೀತಿಯಲ್ಲಿ ಪ್ರಯಾಣದಿಂದ ತೆಗೆದುಕೊಂಡ ತೊಂದರೆಯಾಗಿದ್ದು ಅವನೇ ಅಪಕೃತ್ಯಕಾರನಾಗಿರುತ್ತಾನೆ. ವಿಷಯದ ಈ ಹಿನ್ನೆಲೆಯಿಂದ ಬಸ್ಸಿನ ಛಾವಣಿಯ ಮೇಲೆ, ಆತ ಪ್ರಯಾಣಿಸುತ್ತಿದ್ದ ವಿಷಯವನ್ನು ಚಾಲಕ ಮತ್ತು ನಿರ್ವಾಹಕರುಗಳಿಗೆ ತಿಳಿದಿತ್ತೆಂದು ಪೂರ್ವ ಭಾವನೆ ಮಾಡಿದಾಗ್ಯೂ, ಆತನ ಪ್ರಯಾಣವು ಸಂಪೂರ್ಣವಾಗಿ ಅನಧಿಕೃತವಾಗಿದ್ದು ಹೊಣೆಗಾರಿಕೆಯ ನಿರ್ಲಕ್ಷ್ಯದ ಪ್ರಶ್ನೆಯೇ ಉದ್ಭವಿಸುವುದಿಲ್ಲವೆಂದು ಅಭಿಪ್ರಾಯಪಟ್ಟಿದೆ. ಈ ನ್ಯಾಯಾಲಯವು ನ್ಯಾಯಾಧಿಕರಣವು ಐತೀರ್ಪು ನೀಡಿದ ಪರಿಹಾರವನ್ನು ತುಂಬುವುದು ಸಾರಿಗೆ ನಿಗಮದ ಪ್ರಾಥಮಿಕ ಹೊಣೆಗಾರಿಕೆಯೆಂಬ ನ್ಯಾಯಾಧಿಕರಣದ ಮುಂದಿರುವ ಪ್ರತ್ಯಪೀಲುದಾರ – ಕ್ಲೇಮುದಾರನ ಮೇಲಿನ ವಾದವನ್ನು ಒಪ್ಪಿಕೊಂಡಿರುವುದಿಲ್ಲ. ವಿಷಯದ ಈ ಹಿನ್ನೆಲೆಯಲ್ಲಿ, ಈ ಪ್ರಕರಣದ ಅಪರೂಪದ ವಾಸ್ತವಾಂಶಗಳು ಮತ್ತು ಸಂಧರ್ಬಗಳನ್ನು ಮನಗಂಡಿರುವ ಈ

ನ್ಯಾಯಲಯವು, ಅಪರಾಧಕ್ಕೆ ಗುರಿಯಾಗಿರುವ ಬಸ್ಸಿನ ಚಾಲಕ ಮತ್ತು ನಿರ್ವಾಹಕನ ಕಡೆಯ ಹೊಣೆಗಾರಿಕೆಯ ನಿರ್ಲಕ್ಷ್ಯವನ್ನು ನಿಗದಿಮಾಡಲು ಮತ್ತು ನ್ಯಾಯಾಧಿಕರಣವು ಲೆಕ್ಕ ಹಾಕಿದ ಪರಿಹಾರದ ಮೊಬಲಗಿನಿಂದ ಅಷ್ಟರಮಟ್ಟಿಗೆ ಪರಿಹಾರವನ್ನು ಕೋರಲು ಮೇಲೆ ಹೇಳಿದ ವಿಷಯದಲ್ಲಿ ನೀಡಿದ ಈ ನ್ಯಾಯಾಲಯದ ಪೂರ್ಣ ಪೀಠದ ನಿರ್ಣಯದ ಮೂಲಕ ವಿಧಿಸಿದ ಅನುಪಾತವನ್ನು ಒಪ್ಪಿಕೊಂಡಿರುವುದಿಲ್ಲ.

****

# EXAMINATION FOR RECRUITMENT TO THE POSTS OF DISTRICT JUDGES (CRIMINAL LAW)

## ಜಿಲ್ಲಾ ನ್ಯಾಯಾಧೀಶರ ಹುದ್ದೆಗಳ ನೇಮಕಾತಿ ಸಲುವಾಗಿ ಪರೀಕ್ಷೆ (ಅಪರಾಧ ಕಾನೂನು)

**Date: 30.08.2015**
ದಿನಾಂಕ: 30.08.2015

**Max Marks: 150**
ಗರಿಷ್ಠ ಅಂಕಗಳು: 150

**Time: 2.30 to 5.30 p.m.**
ವೇಳೆ: ಮಧ್ಯಾಹ್ನ 2.30 ರಿಂದ 5.30

## Instructions to candidates:

1) It is compulsory for all the candidates to answer atleast one of the papers in English and in so far as the other paper is concerned, it shall be optional for the candidates to answer the same either in English or in Kannada.
2) In case of ambiguity, if any, in Kannada version of the question paper, the English version of the question paper prevails.

ಪರೀಕ್ಷಾರ್ಥಿಗಳಿಗೆ ಸೂಚನೆಗಳು:

1) ಪರೀಕ್ಷಾರ್ಥಿಗಳು ಕನಿಷ್ಠ ಒಂದು ಉತ್ತರ ಪತ್ರಿಕೆಯನ್ನು ಇಂಗ್ಲೀಷ್ ಮಾಧ್ಯಮದಲ್ಲಿ ಉತ್ತರಿಸುವುದು ಕಡ್ಡಾಯವಾಗಿರುತ್ತದೆ. ಇನ್ನುಳಿದ ಉತ್ತರ ಪತ್ರಿಕೆಯನ್ನು ಇಂಗ್ಲೀಷ್ ಮಾಧ್ಯಮ ಅಥವಾ ಕನ್ನಡ ಮಾಧ್ಯಮದಲ್ಲಿ ಉತ್ತರಿಸಬಹುದು.
2) ಕನ್ನಡ ಮಾಧ್ಯಮದಲ್ಲಿಯ ಪ್ರಶ್ನೆ ಪತ್ರಿಕೆಯಲ್ಲಿ ಏನಾದರೂ ಸಂದಿಗ್ಧತೆ ಅಥವಾ ಅಸ್ಪಷ್ಟತೆ ಕಂಡುಬಂದಲ್ಲಿ, ಇಂಗ್ಲೀಷ್ ಮಾಧ್ಯಮದಲ್ಲಿಯ ಪ್ರಶ್ನೆ ಪತ್ರಿಕೆಯಲ್ಲಿರುವ ಅಂಶವು ಮನ್ನಣೆ ಪಡೆಯುತ್ತದೆ.

## Answer the following/ಕೆಳಗಿನವುಗಳನ್ನು ಉತ್ತರಿಸಿರಿ:

1. (a) State the procedure in brief to be adopted by the Sessions Court to tender pardon to accomplice.

(5 Marks)

(b) What should be the approach of the Sessions Court in appreciating the evidence of the accomplice.

(5 Marks)

1 (ಅ) ಸಹಾಪರಾಧಿಗೆ ಕ್ಷಮಾದಾನ ನೀಡುವಾಗ ಸತ್ರ ನ್ಯಾಯಾಲಯವು ಅನುಸರಿಸಬೇಕಾದ ಪ್ರಕ್ರಿಯೆಗಳನ್ನು ತಿಳಿಸಿರಿ. (5 ಅಂಕಗಳು)

(ಬ) ಸಹಾಪರಾಧಿಯ ಸಾಕ್ಷ್ಯವನ್ನು ಪರಾಮರ್ಶಿಸುವಾಗ ಸತ್ರ ನ್ಯಾಯಾಲಯವು ಅನುಸರಿಸಬೇಕಾದ ಅಂಶಗಳು ಯಾವವು? (5 ಅಂಕಗಳು)

2. How case and counter-cases arise? Discuss the procedure to be adopted while trying case and counter-case with reference to case law. (10 Marks)

2 ಮೊಕದ್ದಮೆ ಮತ್ತು ಪ್ರತಿಮೊಕದ್ದಮೆ ಯಾವ ರೀತಿಯಲ್ಲಿ ಉದ್ಭವಿಸುತ್ತವೆ? ಮೊಕದ್ದಮೆ ಮತ್ತು ಪ್ರತಿಮೊಕದ್ದಮೆಯನ್ನು ವಿಚಾರಣೆ ಮಾಡುವಾಗ ಯಾವ ಪದ್ಧತಿಯನ್ನು ಅನುಸರಿಸಬೇಕಾಗುತ್ತದೆ ಎಂಬುದನ್ನು ನಿರ್ಣಯಿಸಲ್ಪಟ್ಟ ತೀರ್ಪುಗಳೊಂದಿಗೆ ವಿವರಿಸಿರಿ. (10 ಅಂಕಗಳು)

3. What are the points on which the Court has to satisfy itself while placing reliance on the evidence relating to Test Identification Parade? (10 Marks)

3 ಗುರುತಿನ ಕವಾಯತಿಗೆ ಸಂಬಂಧಿಸಿದ ಸಾಕ್ಷ್ಯವನ್ನು ನಂಬಲು ನ್ಯಾಯಾಲಯಗಳು ಯಾವ ಅಂಶಗಳನ್ನು ಮನವರಿಕೆ ಮಾಡಿಕೊಳ್ಳಬೇಕಾಗುತ್ತದೆ? (10 ಅಂಕಗಳು)

4. Explain with relevant case laws regarding admissibility of secondary evidence in respect of electronic records. (10 Marks)

4 ಇಲೆಕ್ಟ್ರಾನಿಕ್ ದಾಖಲೆಗಳ ಬಗ್ಗೆ ಎರಡನೆಯ ಸಾಕ್ಷ್ಯವನ್ನು ಸ್ವೀಕರಿಸಲು ಇರುವಂತಹ ಕಾನೂನಿನ ನಿಯಮಗಳನ್ನು ನಿರ್ಣಯಿಸಲ್ಪಟ್ಟ ತೀರ್ಪುಗಳೊಂದಿಗೆ ವಿವರಿಸಿರಿ. (10 ಅಂಕಗಳು)

5. Discuss the aggravating and mitigating circumstances to be kept in mind by the Court while imposing sentence. (10 Marks)

5 ಶಿಕ್ಷೆ ವಿಧಿಸುವಾಗ ನ್ಯಾಯಾಲಯವು ಗಮನಿಸಬಹುದಾದ ಶಿಕ್ಷೆಯ ಪ್ರಮಾಣ ಕಡಿಮೆಗೊಳಿಸಲು ಮತ್ತು ಶಿಕ್ಷೆಯ ಪ್ರಮಾಣವನ್ನು ಹೆಚ್ಚಿಸಲು ಇರುವ ಸಂದರ್ಭಗಳ ಬಗ್ಗೆ ವಿವರಿಸಿರಿ. (10 ಅಂಕಗಳು)

6. (a) Discuss the law in brief regarding compensation to be paid to the victim of the offence. (5 Marks)

(b) Discuss in brief admissibility/in-admissibility of Statement of the accused recorded by the Police during investigation of a crime. (5 Marks)

೬ (ಅ) ಅಪರಾಧದಲ್ಲಿ ಬಲಿಪಶು ಆದ ವ್ಯಕ್ತಿಗೆ ಕೊಡಬಹುದಾದ ಪರಿಹಾರದ ಬಗ್ಗೆ ಇರುವ ಕಾನೂನಿನ ಬಗ್ಗೆ ಸಂಕ್ಷಿಪ್ತವಾಗಿ ವಿಮರ್ಶಿಸಿರಿ. (5 ಅಂಕಗಳು)

(ಬ) ಪ್ರಕರಣದ ತನಿಖೆಯ ಕಾಲದಲ್ಲಿ ಆರೋಪಿಯು ಪೋಲಿಸರ ಮುಂದೆ ನೀಡಿದ ಹೇಳಿಕೆಯ ಅಂಗೀಕಾರಾರ್ಹತೆ/ಅಂಗೀಕಾರಾರ್ಹತೆಯಲ್ಲದ ಅಂಶಗಳ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿರಿ. (5 ಅಂಕಗಳು)

7. How the Court should evaluate circumstantial evidence in a murder case? Explain with reference to circumstances which probably arise in the murder case.

(10 Marks)

೭ ಕೊಲೆ ಕೇಸಿನಲ್ಲಿ ಸಾಂದರ್ಭಿಕ ಸಾಕ್ಷ್ಯವನ್ನು ನ್ಯಾಯಾಲಯ ಯಾವ ರೀತಿ ಮೌಲ್ಯ ನಿರ್ಧಾರ ಮಾಡಬೇಕು? ಕೊಲೆ ಕೇಸಿನಲ್ಲಿ ಸಾಮಾನ್ಯವಾಗಿ ಉದ್ಭವಿಸುವಂತಹ ಸಂದರ್ಭಗಳ ಬಗ್ಗೆ ವಿವರಿಸಿರಿ. (10 ಅಂಕಗಳು)

8. Discuss the law relating to dying declaration and its evidentiary value. (10 Marks)

೮ ಮರಣೋನ್ಮುಖ ಹೇಳಿಕೆ ಬಗ್ಗೆ ಇರುವ ಕಾನೂನನ್ನು ಮತ್ತು ಅದರ ಸಾಕ್ಷ್ಯದ ಮೌಲ್ಯದ ಬಗ್ಗೆ ವಿವರಿಸಿರಿ. (10 ಅಂಕಗಳು)

9. What amounts to criminal misconduct by a public servant under the Prevention of Corruption Act, 1988? (10 Marks)

೯ ಭ್ರಷ್ಟಾಚಾರ ನಿರೋಧಕ ಕಾನೂನಿನ ಅಡಿಯಲ್ಲಿ ಸರಕಾರಿ ನೌಕರನ ಯಾವ ಕೃತ್ಯಗಳು ಅಪರಾಧಿಕ ಅನಾಚಾರವಾಗುತ್ತವೆ? (10 ಅಂಕಗಳು)

10. (a) How the Criminal Court should assess and appreciate the evidence of an expert witness?

(5 Marks)

(b) How the Criminal Court should assess and appreciate the evidence of a child witness?

(5 Marks)

10 (ಅ) ತಜ್ಞ ಸಾಕ್ಷಿಯ ಸಾಕ್ಷ್ಯವನ್ನು ಕ್ರಿಮಿನಲ್ ನ್ಯಾಯಾಲಯ ಯಾವ ರೀತಿಯಲ್ಲಿ ಮೌಲ್ಯಮಾಪನ ಮತ್ತು ಗುಣಗ್ರಹಣ ಮಾಡಬೇಕಾಗುತ್ತದೆ?

(5 ಅಂಕಗಳು)

(ಬ) ಮಕ್ಕಳ ಸಾಕ್ಷಿಯನ್ನು ಕ್ರಿಮಿನಲ್ ನ್ಯಾಯಾಲಯ ಯಾವ ರೀತಿಯಲ್ಲಿ ಮೌಲ್ಯಮಾಪನ ಮತ್ತು ಗುಣಗ್ರಹಣ ಮಾಡಬೇಕಾಗುತ್ತದೆ? (5 ಅಂಕಗಳು)

11. **<u>Explain in brief</u>:** (5 Marks each)

(a) Evidentiary value of Hostile Witness.

(b) Evidentiary value of Police Witness.

(c) Distinction & similarity between discharge and acquittal.

(d) Criminal Action prescribed against a person for giving false complaint or false information under the Protection of Children from Sexual Offences Act, 2012.

11 <u>ಸಂಕ್ಷಿಪ್ತವಾಗಿ ವಿವರಿಸಿರಿ.</u> (ಪ್ರತಿಯೊಂದಕ್ಕೂ 5 ಅಂಕಗಳು)

(ಅ) ಪ್ರತಿಕೂಲ ಸಾಕ್ಷಿಯ ಸಾಕ್ಷ್ಯವನ್ನು ಯಾವ ರೀತಿಯಲ್ಲಿ ಮೌಲ್ಯನಿರ್ಧಾರ ಮಾಡಲಾಗುವುದು?

(ಬ) ಪೋಲೀಸ್ ಸಾಕ್ಷಿಯನ್ನು ಯಾವ ರೀತಿಯಲ್ಲಿ ಮೌಲ್ಯನಿರ್ಧಾರ ಮಾಡಲಾಗುವುದು?

(ಕ) ವಿಮೋಚನೆ ಮತ್ತು ಖುಲಾಸೆ ಇವೆರಡರಲ್ಲಿಯ ವ್ಯತ್ಯಾಸ ಮತ್ತು ಸಾಮ್ಯರೂಪತೆ ಬಗ್ಗೆ ತಿಳಿಸಿರಿ.

(ಡ) ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾನೂನು, 2012 ರ ಅಡಿಯಲ್ಲಿ ಸುಳ್ಳು ಫಿರ್ಯಾದಿ ಮತ್ತು ಸುಳ್ಳು ಮಾಹಿತಿ ಕೊಟ್ಟಂತಹ ವ್ಯಕ್ತಿಯ ವಿರುದ್ಧ ಜರುಗಿಸಬಹುದಾದ ಕಾನೂನು ಕ್ರಮಗಳೇನು?

**12. <u>Differentiate between</u>:** (5 Marks each)

(a) Omissions and Contradictions.

(b) Primary & Secondary evidence as per the Indian Evidence Act, 1872.

12 <u>ಕೆಳಗಿನವುಗಳಲ್ಲಿಯ ವ್ಯತ್ಯಾಸ ತಿಳಿಸಿರಿ.</u> (ಪ್ರತಿಯೊಂದಕ್ಕೂ 5 ಅಂಕಗಳು)

(ಅ). ಲೋಪ ಮತ್ತು ವಿರೋಧೋಕ್ತಿ.

(ಬ) ಭಾರತೀಯ ಸಾಕ್ಷಿ ಅಧಿನಿಯಮ ಕಾನೂನು, 1872 ರ ಪ್ರಕಾರ ಪ್ರಾಥಮಿಕ ಮತ್ತು ಎರಡನೆಯ ಸಾಕ್ಷ್ಯ.

**13. <u>Translate the following into Kannada</u>:** (10 marks)

13 <u>ಈ ಕೆಳಗಿನದನ್ನು ಕನ್ನಡ ಭಾಷೆಗೆ ಅನುವಾದಿಸಿರಿ</u>: (10 ಅಂಕಗಳು)

In Masalti v. State of U.P., reported in AIR 1965 SC 202, the accused had brutally killed one Gayadin and four members of his family, and then set the bodies on fire in the middle of the field. This had happened due to rivalry between two factions. F.I.R. disclosed 35 persons as assailants and five more persons were added to the list by a subsequent committal order leading to the charges being framed against all 40 persons. A Bench of four Judges of this Court did not accept the defence that specific role had not been attributed to the accused, and that the mere presence of the accused in the unlawful assembly at the time of the incident does not justify the imposition of death sentence. However, as a rule of prudence, the court fixed the minimum number of witnesses

needed to accept prosecution case to base a conviction on. It was emphasized by the court that it was unsafe to rely on the evidence of persons who spoke generally without specific reference to the identity of the individuals, and their overt acts that took place in the course of incident. This judgment laid down the principle of common liability viz., that where a crowd of assailants, who were the members of an unlawful assembly proceed to commit a crime, in pursuance of the common object of that assembly, it is often not possible for the witnesses to describe the actual part played by each one of them, and when a large crowd of persons armed with weapons assaults the intended victims, it may not be necessary that all of them have to take part in the actual assault. In that case several weapons were carried by different members of the unlawful assembly, and an accused who was the member of such an assembly and was carrying firearms was not permitted to take any advantage of the fact that he did not use those firearms, though other members of the assembly used their respective firearms.

**14. Translate the following into English:** (10 marks)

14 ಈ ಕೆಳಗಿನದನ್ನು ಆಂಗ್ಲ ಭಾಷೆಗೆ ಅನುವಾದಿಸಿರಿ: (10 ಅಂಕಗಳು)

ಇತ್ತೀಚಿನ ವರ್ಷಗಳಲ್ಲಿ ವೈವಾಹಿಕ ವಿವಾದಗಳು ಸ್ಪಷ್ಟವಾಗಿ ಗೋಚರಿಸುವಷ್ಟು ಹೆಚ್ಚಾಗುತ್ತಿವೆ. ವಿವಾಹ ವ್ಯವಸ್ಥೆಯನ್ನು ಈ ರಾಷ್ಟ್ರದಲ್ಲಿ ಅತ್ಯಂತ ಪವಿತ್ರವಾದುದೆಂದು ಭಾವಿಸುತ್ತಾರೆ. ಮಹಿಳೆಗೆ ತನ್ನ ಪತಿ ಮತ್ತು ಅವನ ಸಂಬಂಧಿಕರಿಂದಾಗುವ ಕಿರುಕುಳದ ವಿರುದ್ಧ ಹೋರಾಡುವ ಸ್ಪಷ್ಟ ಉದ್ದೇಶದೊಂದಿಗೆ ಐ.ಪಿ.ಸಿ. ಸೆಕ್ಷನ್ 498-ಎ ಯನ್ನು

ಪರಿಚಯಿಸಲಾಯಿತು. ಐ.ಪಿ.ಸಿ. ಸೆಕ್ಷನ್ 498-ಎ ಸಂಜ್ಞೇಯವಾದ ಮತ್ತು ಜಾಮೀನುರಹಿತ ಅಪರಾಧವೆಂಬ ಸಂಗತಿಯ ಕಾರಣದಿಂದಾಗಿ, ಅತೃಪ್ತ ಪತ್ನಿಯರು ಈ ಉಪಬಂಧಗಳನ್ನು ರಕ್ಷಣೆಯಾಗಿ ಬಳಸುವುದಕ್ಕಿಂತ ಆಯುಧಗಳನ್ನಾಗಿ ಬಳಸುವಂಥ ಅಹಂಕಾರದ ನಂಬಲಾಗದ ಸ್ಥಿತಿಯನ್ನು ತಲುಪಿದೆ. ಕಿರುಕುಳ ನೀಡುವ ಸುಲಭವಾದ ದಾರಿಯೆಂದರೆ, ಪತಿ ಮತ್ತು ಅವನ ಸಂಬಂಧಿಕರನ್ನು ಈ ಉಪಬಂಧದ ಅಡಿಯಲ್ಲಿ ಬಂಧಿಸುವಂತೆ ಮಾಡುವುದು. ಸುಮಾರು ಸಂಖ್ಯೆಯ ಪ್ರಕರಣಗಳಲ್ಲಿ, ಹಾಸಿಗೆ ಹಿಡಿದಿರುವ, ಪತಿಯ ತಾತಂದಿರು ಮತ್ತು ಅಜ್ಜಿಯರು, ದಶಕಗಳಿಂದ ವಿದೇಶದಲ್ಲಿ ನೆಲೆಸಿರುವ ಅವನ ಅಕ್ಕತಂಗಿಯರು ಬಂಧಿತರಾಗಿದ್ದಾರೆ. ಗೃಹವ್ಯವಹಾರಗಳ ಮಂತ್ರಾಲಯ, ರಾಷ್ಟ್ರೀಯ ಅಪರಾಧ ದಾಖಲೆಗಳ ವಿಭಾಗವು ಪ್ರಕಟಿಸಿದ "ಭಾರತದಲ್ಲಿ ಅಪರಾಧ 2012ರ ಅಂಕಿಅಂಶಗಳು" ಐ.ಪಿ.ಸಿ. ಸೆಕ್ಷನ್ 498-ಎ ಅಡಿಯಲ್ಲಿ ಅಪರಾಧಕ್ಕಾಗಿ 2012ರ ವರ್ಷದ ಅವಧಿಯಲ್ಲಿ ಭಾರತಾದ್ಯಂತ 1,97,762 ವ್ಯಕ್ತಿಗಳ ಬಂಧನವನ್ನು ತೋರಿಸುತ್ತದೆ. ಇದು 2011ರ ವರ್ಷಕ್ಕಿಂತ ಶೇ. 9.4 ಹೆಚ್ಚಾಗಿದೆ. 2012ರಲ್ಲಿ ಈ ಉಪಬಂಧದ ಅಡಿಯಲ್ಲಿ ಬಂಧಿತರಾದವರಲ್ಲಿ ಸುಮಾರು ಕಾಲುಭಾಗದಷ್ಟು ಮಂದಿ ಮಹಿಳೆಯರು; ಅಂದರೆ, 47,951 ಜನ ಮಹಿಳೆಯರಿದ್ದು, ಇದು ಪತಿಯರ ತಾಯಂದಿರು ಮತ್ತು ಅಕ್ಕತಂಗಿಯರನ್ನು ಬಂಧನದ ವ್ಯಾಪ್ತಿಗೆ ಉದಾರವಾಗಿ ಸೇರಿಸಲಾಯಿತೆಂಬುದನ್ನು ನಿರೂಪಿಸುತ್ತದೆ. ಅದರ ಪಾಲು, ದಂಡಸಂಹಿತೆ ಅಡಿಯಲ್ಲಿ ಮಾಡಲಾದ ಅಪರಾಧಗಳ ಅಡಿಯಲ್ಲಿ ಬಂಧಿತರಾದ ಒಟ್ಟು ವ್ಯಕ್ತಿಗಳ ಶೇ. 6 ರಷ್ಟಿದೆ. ಇದು ಭಾರತ ದಂಡಸಂಹಿತೆಯ ವಿವಿಧ ಪ್ರಕರಣಗಳ ಅಡಿಯಲ್ಲಿ ಮಾಡಲಾದ ಒಟ್ಟು ಅಪರಾಧಗಳ ಶೇ. 45ಕ್ಕೆ ಸಮನಾಗಿದ್ದು, ಕಳ್ಳತನ ಮತ್ತು ಗಾಯವನ್ನು ಹೊರತುಪಡಿಸಿ ಯಾವುದೇ ಇತರ ಅಪರಾಧಗಳಿಗಿಂತ ಹೆಚ್ಚಾಗಿದೆ. ಐ.ಪಿ.ಸಿ. ಸೆಕ್ಷನ್ 498-ಎ ಅಡಿಯಲ್ಲಿ ಪ್ರಕರಣವನ್ನು ದೋಷಾರೋಪಗೊಳಿಸುವ ಪ್ರಮಾಣವು ಶೇ. 93.6 ರಷ್ಟು ಹೆಚ್ಚಿದ್ದು, ದೋಷ ನಿರ್ಣಯದ ಪ್ರಮಾಣವು ಕೇವಲ ಶೇ.15ರಷ್ಟು ಮಾತ್ರವಿದ್ದು, ಅದು ಎಲ್ಲಾ ಶೀರ್ಷಿಕೆಗಳ ಎದುರಿಗೆ ಅತ್ಯಂತ ಕಡಿಮೆಯಿದೆ. 3,72,706 ಪ್ರಕರಣಗಳು ಅಧಿವಿಚಾರಣೆಗೆ ಬಾಕಿಯಿದ್ದು, ಅದರಲ್ಲಿ ಪ್ರಸ್ತುತ ಅಂದಾಜಿನ ಮೇಲೆ ಸುಮಾರು 3,17,000 ಬಿಡುಗಡೆಯಾಗುವ ನಿರೀಕ್ಷೆಯಿದೆ.